# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ–49, ರಾಜರಾಜೇಶ್ವರಿ ನಗರ (ಹಳೆ ವಾರ್ಡ್ ಸಂಖ್ಯೆ160) ರಲ್ಲಿ ದಿನಾಂಕ: 03.09.2022 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ಸೆಪ್ಟಂಬರ್–2022 ಮಾಹೆಯ ಮೊದಲನೇ ಶನಿವಾರದ **ವಾರ್ಡ್** ಸಮಿತಿ ಸಭೆಯನ್ನು ದಿನಾಂಕ: 03.09.2022 ರಂದು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

### ❖ ಅರಣ್ಯ ಇಲಾಖೆ/ವಿಭಾಗಕ್ಕೆ ಸಂಬಂಧಿಸಿದ ದೂರುಗಳು

- ಬಿಇಎಂಎಲ್ 3ನೇ ಹಂತದ ನಿವಾಸಿಯಾದ ಶ್ರೀ ವಿಶ್ವೇಶ್ವರ ಆರ್ ರವರು ತಮ್ಮ ಪ್ರದೇಶದಲ್ಲಿರುವ ಬೀಳುವ ಹಂತದಲ್ಲಿರುವ ಮರವನ್ನು ತೆರವುಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಮಾಡಿಕೊಂಡಿದ್ದರೂ ಇಲ್ಲಿಯವರೆಗೆ ತೆರವುಗೊಳಿಸಿರುವುದಿಲ್ಲವೆಂದು ದೂರು ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿಗಳು ಉಪವಲಯ ಅರಣ್ಯಾಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ದೂರಿನ ವಿವರ ನೀಡಿ ಪರಿಹರಿಸುವಂತೆ ಸೂಚಿಸಿದರು.
- ಬೆಂಗಳೂರು ನಗರದಾದ್ಯಂತ ಸತತ ಸುರಿಯುತ್ತಿರುವ ಮಳೆಯಿಂದ ತಮ್ಮ ಪ್ರದೇಶದಲ್ಲಿ ಮರವೊಂದು ಬೀಳುವ ಹಂತದಲ್ಲಿದ್ದು ತುರ್ತಾಗಿ ತೆರವುಗೊಳಿಸುವಂತೆ ಬಿಇಎಂಎಲ್ 3ನೇ ಹಂತದ ನಿವಾಸಿಯಾದ ಶ್ರೀ ವಿಜಯ ರವರು ಕೋರಿದರು.

### ❖ ಘನ ತ್ಯಾಜ್ಯ ನಿರ್ವಹಣೆ/ಆರೋಗ್ಯ ವಿಭಾಗಕ್ಕೆ ಸಂಬಂಧಿಸಿದ ದೂರುಗಳು

- ಬಿಇಎಂಎಲ್ 4ನೇ ಹಂತದ ನಿವಾಸಿಯಾದ ಅರುಣ್ ಭಾಸ್ಕರ್ ರವರು ಕುವೆಂಪು ಸರ್ಕಲ್ ಬಳಿ ಇರುವ ನಯನ ಸ್ಪಿರಿಟ್ಸ್ ಹತ್ತಿರ ವಸತಿ ಪ್ರದೇಶದಲ್ಲಿ ಧೂಮಪಾನ ಮಾಡುತ್ತಿರುವುದಾಗಿ ಹಾಗೂ ಅಂಗಡಿಯ ಮಾಲೀಕರು ಪ್ಲಾಸ್ಟಿಕ್ ಲೋಟಗಳಲ್ಲಿ ಟೀ/ಕಾಫಿ ನೀಡುತಿರುವುದಾಗಿ ದೂರು ನೀಡಿದರು.

- ಬಿಇಎಂಎಲ್ 4ನೇ ಹಂತದಲ್ಲಿ ಪರವಾನಗಿ ಪಡೆಯದೇ ಅನಧಿಕೃತವಾಗಿ ಹೋಟೆಲ್/ಅಂಗಡಿ ನಡೆಸುತ್ತಿರುವವರ ವಿರುದ್ಧ ಕ್ರಮ ಜರುಗಿಸಲು ಆ ಭಾಗದ ನಿವಾಸಿಯಾದ ಶ್ರೀ ಶರತ್ ರವರು ದೂರು ನೀಡಿದರು.
- 2ನೇ ಕ್ರಾಸ್, ಐಡಿಯಲ್ ಹೋಮ್ಸ್ ಬಡಾವಣೆಯ ನಿವಾಸಿಯಾದ ಶ್ರೀ ಆಚಾರ್ಯುಲು ರವರು ತಮ್ಮ ಪ್ರದೇಶಕ್ಕೆ ಕಳೆದ 15 ದಿನಗಳಿಂದ ಒಣ ಕಸ ಸಂಗ್ರಹಣಾ ವಾಹನ ಬಂದಿರುವುದಿಲ್ಲವೆಂದು ದೂರು ನೀಡಿದರು.
- ಬಿಇಎಂಎಲ್ 3ನೇ ಹಂತದ ನಿವಾಸಿಯಾದ ಶ್ರೀ ವಿಶ್ವೇಶ್ವರ ಆರ್ ರವರು ಪೌರ ಕಾರ್ಮಿಕರಿಗೆ ಕೈಗವುಸು ನೀಡುವಂತೆ ಕೋರಿದರು.
- ಪಾಲಿಕೆ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ನಿಷೇಧಿಸಿದ್ದರೂ, ವಾರ್ಡ್ ವ್ಯಾಪ್ತಿಯ ಕೆಲವು ಕಡೆ ಇನ್ನೂ ಪ್ಲಾಸ್ಟಿಕ್ ಬಳಕೆಯಾಗುತ್ತಿದ್ದು, ಸದರಿಯವರ ವಿರುದ್ಧ ಸೂಕ್ತ ಕ್ರಮ ವಹಿಸುವಂತೆ ಕೋರಿದರು.
- ಮನೆಗಳಿಂದ ಕಸ ಸಂಗ್ರಹಿಸುವಾಗ ಪ್ಲಾಸ್ಟಿಕ್ ಮಿಶ್ರಿತವಾಗಿದ್ದಲ್ಲಿ ಕಸ ತೆಗೆದುಕೊಳ್ಳದಂತೆ ಆಟೋ ಚಾಲಕರಿಗೆ ಸೂಚಿಸುವಂತೆ ಸಲಹೆ ನೀಡಿದರು.
- ಸಾರ್ವಜನಿಕರು ತಮ್ಮ ತಮ್ಮ ಪ್ರದೇಶಗಳ, ಬೀದಿಗಳ ಸ್ವಚ್ಛತೆ ಹಾಗೂ ಕುಂದುಕೊರತೆಗಳ ಬಗ್ಗೆ ಗಮನ ಹರಿಸಿ ಸಮಸ್ಯೆ ಪರಿಹರಿಸಿಕೊಳ್ಳಲು ಕೋರಿದರು.
- ಐಡಿಯಲ್ ಹೋಮ್ಸ್ ಬಡಾವಣೆಯ ಒಣ ಕಸ ಸಂಗ್ರಹಣಾ ಘಟಕದ ಬಳಿ ಕಸವನ್ನು ವೃಷಭಾವತಿ ವ್ಯಾಲಿಗೆ ಸುರಿಯುತ್ತಿರುವುದಾಗಿ ಶ್ರೀ ರಾಮಚಂದ್ರರವರು ದೂರು ನೀಡಿದರು.

## ❖ ಬಿ.ಡಬ್ಲ್ಯೂ.ಎಸ್.ಎಸ್.ಬಿ ವಿಭಾಗಕ್ಕೆ ಸಂಬಂಧಿಸಿದ ದೂರುಗಳು

- ಮಳೆ ಬಂದಾಗ ಮ್ಯಾನ್ ಹೋಲ್ ಗಳಿಂದ ನೀರು ಉಕ್ಕುತ್ತಿರುವುದಾಗಿ ಸಾರ್ವಜನಿಕರು ದೂರು ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಬಿ.ಡಬ್ಲ್ಯೂ.ಎಸ್.ಎಸ್.ಬಿ ವಿಭಾಗದ ಸಹಾಯಕ ಅಭಿಯಂತರರು, ಮಳೆ ನೀರಿನ ಪೈಪ್ ಅನ್ನು ಚರಂಡಿಗೆ ಬಿಡದೆ UGD ಲೈನ್ ಗೆ ಜೋಡಿಸಿರುವುದರಂದ ಸಾಮರ್ಥ್ಯಕ್ಕಿಂತ ಹೆಚ್ಚಿನ ನೀರು UGD ಲೈನ್ ನಲ್ಲಿ ಹರಿಯುವುದರಿಂದ ಈ ಸಮಸ್ಯೆ ಉಂಟಾಗಿದ್ದು, ಸಾರ್ವಜನಿಕರು ಮಳೆ ನೀರು ಕೊಯ್ಲು (Rain water Harvesting) ವಿಧಾನ ಅಳವಡಿಸುವಂತೆ ಕೋರಿದರು.
- ಅನುಮತಿ ಪಡೆಯದೇ ಬೆಸ್ಕಾಂ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗಳಿಂದ ರಸ್ತೆ ಅಗೆಯುತ್ತಿರುವುದರಿಂದ ರಸ್ತೆ ಗುಂಡಿಗಳು ಉಂಟಾಗುತ್ತಿರುವುದಾಗಿ ಸಾರ್ವಜನಿಕರು ದೂರು ನೀಡಿದರು.

➢ ಬಿ.ಇ.ಎಂ.ಎಲ್ 3ನೇ ಶ್ರೀನಿವಾಸಯ್ಯ ರಸ್ತೆಯಲ್ಲಿ (ಬಿಬಿಎಂಪಿ ಕಛೇರಿ ಪಕ್ಕದ ರಸ್ತೆ) ಪ್ರತೀ ಬಾರಿಯೂ ಮಳೆ ಬಂದಾಗ ಮ್ಯಾನ್ ಹೋಲ್ ಚೇಂಬರ್ ನಿಂದ ನೀರು ಉಕ್ಕುತ್ತಿರುವುದರಿಂದ ರಸ್ತೆ ಹಾಳಾಗುತ್ತಿದ್ದು, ವಾಹನ ಸವಾರರಿಗೆ ತೊಂದರೆ ಉಂಟಾಗುತ್ತಿರುವುದರಿಂದ ಶಾಶ್ವತ ಪರಿಹಾರ ಕಲ್ಪಿಸಲು ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ವಿಭಾಗದ ಸಹಾಯಕ ಅಭಿಯಂತರರಿಗೆ ಸೂಚಿಸಿದರು.

## ❖ <u>ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದ ದೂರುಗಳು</u>

➢ ಕೆಂಪೇಗೌಡ ಜೋಡಿ ರಸ್ತೆಯಲ್ಲಿರುವ ಬೆಸ್ಟ್ ಕ್ಲಬ್ ಕ್ರಿಕೆಟ್ ಗ್ರೌಂಡ್ ಎದುರು ರಸ್ತೆಯಲ್ಲಿರುವ ಭಾರತ್ ಫಾರ್ಮ್ಸ್ ಹತ್ತಿರ ಮಳೆ ನೀರು ನಿಲ್ಲುತ್ತಿದ್ದು, ಹೂಳು ತೆಗೆಯುವಂತೆ ಆ ಭಾಗದ ನಿವಾಸಿಯೋರ್ವರು ಕೋರಿದರು.

➢ ರಂಗಮಂದಿರ ಪಕ್ಕದ ರಸ್ತೆಯಲ್ಲಿ ಮಳೆ ಬಂದಾಗ ಪ್ರತೀ ಬಾರಿಯೂ ನೀರು ನಿಲ್ಲುತ್ತಿರುವುದಾಗಿ ಆ ಭಾಗದ ಸಾರ್ವಜನಿಕರು ದೂರು ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಸಭೆ ಮುಗಿದ ನಂತರ ಎಲ್ಲೆಲ್ಲಿ ಮಳೆ ನೀರು ನಿಲ್ಲುತ್ತಿದೆಯೆಂದು ಸ್ಥಳ ಪರಿವೀಕ್ಷಣೆ ನಡೆಸಿ ಚರಂಡಿಯಲ್ಲಿ ಹೂಳು ತುಂಬಿದ್ದಲ್ಲಿ ತೆರವುಗೊಳಿಸಿ ಮಳೆ ನೀರು ಸರಾಗವಾಗಿ ಹರಿಯಲು ವ್ಯವಸ್ಥೆ ಕಲ್ಪಿಸುವುದಾಗಿ ತಿಳಿಸಿದರು.

➢ ಶಿವಣ್ಣ ಬಡಾವಣೆಯಲ್ಲಿ ಮಳೆ ಬಂದಾಗ ಪ್ರವಾಹ ಪರಿಸ್ಥಿತಿ ಉಂಟಾಗುತ್ತಿರುವುದಾಗಿ ಆ ಭಾಗದ ನಿವಾಸಿಯೋರ್ವರು ದೂರು ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿಗಳು ಸಭೆ ಮುಗಿದ ನಂತರ ಸ್ಥಳ ಪರಿವೀಕ್ಷಣೆ ನಡೆಸಿ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

➢ ಐಡಿಯಲ್ ಹೋಮ್ಸ್ ಬಡಾವಣೆಯ ಶನೇಶ್ವರ ದೇವಸ್ಥಾನದ ರಸ್ತೆಯಲ್ಲಿ ರಸ್ತೆ ಅಗೆದ ನಂತರ ಮರು ಪೂರಣಗೊಳಿಸಿರುವುದಿಲ್ಲವೆಂದು (Restoration) ದೂರು ನೀಡಿದರು.

➢ ಬಿ.ಇಎಂಎಲ್ 5ನೇ ಹಂತದ ನಿವಾಸಿಯಾದ ಶ್ರೀಮತಿ ಸವಿತಾರವರು ಈ ಕೆಳಕಂಡ ದೂರುಗಳನ್ನು ನೀಡಿದರು.

- ಪ್ರಸ್ತುತ ನಿರಂತರ ಮಳೆ ಸುರಿಯುತ್ತಿರುವುದರಿಂದ ಮಳೆ ನೀರು ಚರಂಡಿಯಲ್ಲಿ ಹರಿಯದೇ ರಸ್ತೆಯಲ್ಲಿ ಹರಿಯುತ್ತಿದ್ದು, ಚರಂಡಿಯಲ್ಲಿ ತುಂಬಿರುವ ಹೂಳನ್ನು ತೆರವುಗೊಳಿಸಿ ನೀರು ಸರಾಗವಾಗಿ ಚರಂಡಿಯಲ್ಲಿ ಹರಿಯುವಂತೆ ಕ್ರಮ ವಹಿಸಲು ಕೋರಿದರು.
- ಬಿ.ಡಬ್ಲ್ಯೂ.ಎಸ್.ಎಸ್.ಬಿ ವಿಭಾಗದ ವತಿಯಿಂದ ರಸ್ತೆ ಅಗೆದಿರುವ ಭಾಗ ಕುಸಿಯುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ವಹಿಸುವಂತೆ ಕೋರಿದರು.

- ರಸ್ತೆ ಗುಂಡಿ ಮುಚ್ಚಲು ಪೂರೈಕೆಯಾಗುತ್ತಿರುವ ಡಾಂಬರು ಮಿಶ್ರಣದ ಗುಣಮಟ್ಟ ಕಾಪಾಡುವಂತೆ ಕೋರಿದರು.

- ಬಿಇಎಂಎಲ್ 3ನೇ ಹಂತದಲ್ಲಿ ಬೆಸ್ಕಾಂ ವತಿಯಿಂದ ಅಗೆದಿರುವ ರಸ್ತೆಯ ಭಾಗವನ್ನು ಸರಿಪಡಿಸಲು ಸದರಿ ಪ್ರದೇಶದ ನಿವಾಸಿಯೋರ್ವರು ಕೋರಿದರು.
- Indian Bank colony, 21ನೇ ಅಡ್ಡರಸ್ತೆ ನಿವಾಸಿಯೋರ್ವರು ಮಳೆ ನೀರು ರಸ್ತೆಯಲ್ಲಿ ನಿಲ್ಲುತ್ತಿದೆಯೆಂದು ದೂರು ನೀಡಿದರು.
- ಸೂರ್ಯವಂಶಿ ಬಡಾವಣೆಯಲ್ಲಿ ಚರಂಡಿಯಲ್ಲಿ ತುಂಬಿರುವ ಹೂಳನ್ನು ತೆರವುಗೊಳಿಸುವಂತೆ ಆ ಭಾಗದ ನಿವಾಸಿಯಾದ ಶ್ರೀ ಸತೀಶ್ ಕುಮಾರ್ ರವರು ಕೋರಿದರು.
- ಬಿಇಎಂಎಲ್ 3ನೇ ಹಂತದ, 1ನೇ ಅಡ್ಡರಸ್ತೆಯಲ್ಲಿ ಚರಂಡಿ ಅಭಿವೃದ್ಧಿಪಡಿಸಲು ಆ ಬಾಗದ ನಿವಾಸಿಯಾದ ಸುಪ್ರಭಕುಮಾರ್ ರವರು ಕೋರಿದರು.
- ಕಟ್ಟಡ ನಿರ್ಮಿಸುವಾಗ ಉಳಿದ ಕಾಂಕ್ರೀಟ್ ತ್ಯಾಜ್ಯವನ್ನು ರಸ್ತೆಗೆ ಸುರಿಯುತ್ತಿರುವುದಾಗಿ ಸಾರ್ವಜನಿಕರು ದೂರು ನೀಡಿದರು.
- ಬಿಬಿಎಂಪಿ ಕಚೇರಿಯ ಬಳಿ ಟೀ ಅಂಗಡಿಯ ಮುಂಭಾಗದಲ್ಲಿ ಮನೆಗಳ ಹತ್ತಿರ ಧೂಮಪಾನ ಮಾಡುತ್ತಿದ್ದು, ಸೂಕ್ತ ಕ್ರಮ ವಹಿಸುವಂತೆ ಕೋರಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಫ್ಲೆಕ್ಸ್ & ಬ್ಯಾನರ್‌ಗಳನ್ನು ಹಾಕಲು ಅನುಮತಿ ನೀಡದಂತೆ ಕೋರಿದರು.
- ಪಂಚಶೀಲಾ ಬ್ಲಾಕ್‌ನಲ್ಲಿ ಉಂಟಾಗಿರುವ ರಸ್ತೆ ಗುಂಡಿ ಮುಚ್ಚಿಲಸು ಆ ಭಾಗದ ನಿವಾಸಿಯಾದ ಶ್ರೀ ಪೃಥ್ವಿರಾಜ್ ರವರು ಕೋರಿದರು.

## ❖ <u>ಬೆಸ್ಕಾಂ ವಿಭಾಗಕ್ಕೆ ಸಂಬಂಧಿಸಿದ ದೂರುಗಳು</u>

- ಬೆಸ್ಕಾಂ ಲೈನ್ ನಿಂದ ಶಬ್ದ ಬರುತ್ತಿರುವುದಾಗಿ ಸಾರ್ವಜನಿಕರು ದೂರು ನೀಡಿದರು.
- ವಿದ್ಯುತ್ ಕಂಬಗಳ ಮೇಲೆ ಫ್ಲೆಕ್ಸ್ ಅಳವಡಿಸಿರುವವರ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಕೋರಿದರು.
- ಬಿಇಎಂಎಲ್ ಕಾಂಪ್ಲೆಕ್ಸ್ ಹತ್ತಿರ 11KV ಬಾಕ್ಸ್ ಇದ್ದು ಅದರ ಬಳಿಯೇ ಬೀದಿ ಬದಿ ವ್ಯಾಪಾರಿಗಳು ವ್ಯಾಪಾರ ಮಾಡುತ್ತಿದ್ದು, ಅನಾಹುತ ಸಂಭವಿಸುವ ಮುನ್ನ ಬೀದಿ ಬದಿ ವ್ಯಾಪಾರಿಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಕೋರಿದರು.

## ❖ ಇತರೆ ವಿಷಯಗಳು

- ಶ್ರೀಮತಿ ಸವಿತಾರವರು ನೋಡಲ್ ಅಧಿಕಾರಿಗಳ ಕರ್ತವ್ಯಗಳು ಹಾಗೂ ಜವಾಬ್ದಾರಿಗಳನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿಸಿದರು.
- 2 ತಿಂಗಳಿಗೊಮ್ಮೆಯಾದರೂ ಅರಣ್ಯ ಇಲಾಖೆ, ಬೃಹತ್ ನೀರುಗಾಲುವೆ, ಪೊಲೀಸ್ ಇಲಾಖೆ, ಟ್ರಾಫಿಕ್ ವಿಭಾಗದ ಅಧಿಕಾರಿಗಳನ್ನು ತಪ್ಪದೇ ಸಭೆಗೆ ಹಾಜರಾಗಿ ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳಿಗೆ ಸಾರ್ವಜನಿಕರು ಮನವಿ ಮಾಡಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸಹಿ/– | ಸಹಿ/– |
| ಕಾರ್ಯದರ್ಶಿಗಳು ವಾರ್ಡ್ ಸಮಿತಿ | ನೋಡಲ್ ಅಧಿಕಾರಿಗಳು |
| ವಾರ್ಡ್ ಸಂಖ್ಯೆ–49 | ವಾರ್ಡ್ ಸಂಖ್ಯೆ–49 |

***ಪ್ರತಿಯನ್ನು:–***

1. ಮಾನ್ಯ ವಲಯ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು
3. ರಾರಾನಗರ ವಲಯ ರವರ ಮಾಹಿತಿಗಾಗಿ.
4. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
5. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
6. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ವಾರ್ಡ್ ಸಮಿತಿ ಸದಸ್ಯರುಗಳಿಗೆ.
8. ಕಛೇರಿ ಪ್ರತಿ.